ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ
ಇವರ ನ್ಯಾಯಾಲಯದಲ್ಲಿ
ಸಿ.ಸಿ.ನಂಬರ್ 918–2014

..ವಿರುದ್ಧ ...

ಪಿ.ಡಬ್ಲು-2.
ಸಿ.ಡಬ್ಲು-೧.

ಹೆಸರು : ಮೆಹಬೂಬ್ ಖಾನ್
ತಂದೆಯ ಹೆಸರು : ಅಮೀರ್ ಖಾನ್
ವಯಸ್ಸು : 48 ವರ್ಷ
ಉದ್ಯೋಗ : ವ್ಯಾಪಾರ
ವಾಸ ಸ್ಥಳ : ಕೆ.ಆರ್.ಪುರಂ

ದಿ: 26.07.2024 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.೨ ರವರ ಪರಿಚಯ ಇಲ್ಲ. ಆರೋಪಿಯ ಪರಿಚಯವಿಲ್ಲ ಮತ್ತು ಅವರನ್ನು ಈ ಹಿಂದೆ ನೋಡಿರುವುದಿಲ್ಲ.

ಪೊಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಈಗ ನನಗೆ ತೋರಿಸಿದ ನಿಪಿ.೧ ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಸುಮಾರು 15 ವರ್ಷಗಳ ಹಿಂದೆ ಹೊಸಕೋಟೆ ಪೊ.ಠಾಣೆಗೆ ಹೋದಾಗ ಪೊಲೀಸರು ಸಹಿ ಮಾಡುವಂತೆ ಸೂಚಿಸಿದ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆ ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ದಾಳಿ ಮಾಡಿ, ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ರಕ್ತ ಚಂದನದ ಮರದ ತುಂಡುಗಳನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ. ನಾನು ಯಾವುದೇ ದಾಳಿಯಲ್ಲಿ ಭಾಗವಹಿಸಿರುವುದಿಲ್ಲ. ನಿಪಿ.1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲು: ಸಹಾಯಕ ಸರ್ಕಾರಿ ಅಭಿಯೋಜಕರಿಂದ .

ಹೊಸಕೋಟೆ ಪಟ್ಟಣದ ಸಂತೆ ಸರ್ಕಲ್ ನ ಚಿಂತಾಮಣಿ ರಸ್ತೆಯಲ್ಲಿರುವ ಗುಜುರಿ ಅಂಗಡಿಯಲ್ಲಿ ರಕ್ತ ಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಸಂಗ್ರಹ ಮಾಡಿದ ಕುರಿತು ದಾಳಿ ಮಾಡುವ ಸಲುವಾಗಿ ನನ್ನನ್ನು ಪಂಚರರಾಗಿ ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಿ:28.01.2014 ರಂದು ನಾನು ಮತ್ತು ಚಾ.ಸಾ.2 ರಿಂದ 10 ರವರುಗಳು ಇಲಾಖಾ ಜೀಪ್ ನೊಂದಣಿ ಸಂಖ್ಯೆ ಕೆಎ-04-ಜಿ-182 ಮತ್ತು ಕೆಎ-04-ಜಿ-816 ರಲ್ಲಿ ಹೊಸಕೋಟೆ ಪಟ್ಟಣದ ಸಂತೆ ಸರ್ಕಲ್ ಚಿಂತಾಮಣಿ ರಸ್ತೆಯಲ್ಲಿರುವ ಆರೋಪಿ ಮಾಲೀಕತ್ವದ ಗುಜುರಿ ಅಂಗಡಿಗೆ ದಾಳಿ ಮಾಡಿದ್ದೇವು ಎಂದರೆ ಸರಿಯಲ್ಲ. ನಂತರ ನನ್ನ ಸಮಕ್ಷಮ ಪೊಲೀಸರು ಸದರಿ ಗುಜುರಿ ಅಂಗಡಿಯನ್ನು ಪರಿಶೀಲಿಸಿದಾಗ ಅಂಗಡಿಯ ಮುಂಭಾಗದಲ್ಲಿ ಗುಜುರಿ ಸಾಮಾನುಗಳು ರಾಶಿ ಹಾಕಿದ್ದು ಮತ್ತು ಸದರಿ ಅಂಗಡಿಯ ಮಾಲೀಕನ ಹೆಸರು ವಿಚಾರ ಮಾಡಲಾಗಿ ಖಲೀಂ ಪಾಷಾ ಬಿನ್ ಮೊಹಮದ್ ಅನೀಫ್ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ಚಾ.ಸಾ.12 ರವರು ಆರೋಪಿಯ ಬಳಿ ರಕ್ತ ಚಂದನದ ಮರದ ತುಂಡುಗಳ ಕುರಿತು ವಿಚಾರಿಸಿದಾಗ ಆರೋಪಿಯು ಗಲಿಬಿಲಿ ಗೊಂಡು ತನಗೇನು ಗೊತ್ತಿಲ್ಲ ಎಂದು ಹೇಳಿ ಅಲ್ಲಿಂದ ಓಡಿ ಹೋಗಲು ಪ್ರಯತ್ನಿಸಿದ್ದ ಎಂದರೆ ಸರಿಯಲ್ಲ. ನಂತರ ಚಾ.ಸಾ.12 ರವರು ಆತನನ್ನು ಹಿಡಿದುಕೊಂಡು ಗುಜುರಿ ಸಾಮಾನುಗಳನ್ನು ತೆಗೆದು ನೋಡಲಾಗಿ ಅವುಗಳ ಮಧ್ಯೆ 25 ರಕ್ತ ಚಂದನದ ತುಂಡುಗಳು ಇರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ನಂತರ ಸದರಿ ರಕ್ತ ಚಂದನದ ತುಂಡುಗಳ ಕುರಿತು ವಿಚಾರಿಸಲಾಗಿ ಆರೋಪಿಯು ಯಾರೋ ಆಂಧ್ರ ಪ್ರದೇಶದವರು ತನಗೆ ಪರಿಚಯವಾಗಿ ಅಲ್ಲಿನ ಮರಗಳನ್ನು ತಂದು ಇಟ್ಟುಕೊಂಡಿರುವುದಾಗಿ ತಿಳಿಸಿದ್ದ ಎಂದರೆ ಸರಿಯಲ್ಲ. ನಂತರ ಚಾ.ಸಾ.12 ರವರು ಆರೋಪಿಯ ಬಳಿ ರಕ್ತ ಚಂದನದ ಮರದ ತುಂಡುಗಳ ಪರವಾನಿಗೆ ಕುರಿತು ವಿಚಾರಿಸಲಾಗಿ ಆ ರೀತಿ ಯಾವುದೇ ಪರವಾನಿಗೆ ಇರುವುದಿಲ್ಲ ಮತ್ತು ಕಳ್ಳತನದಿಂದ ಮರಗಳನ್ನು ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದ ಎಂದರೆ ಸರಿಯಲ್ಲ. ನಂತರ ನನ್ನ ಸಮಕ್ಷಮ ಸದರಿ 25 ರಕ್ತ ಚಂದನದ ತುಂಡುಗಳನ್ನು ತೂಕ ಮತ್ತು ಅಳತೆ ಮಾಡಿದ್ದರು ಎಂದರೆ ಸರಿಯಲ್ಲ. ನಂತರ ಸದರಿ 25 ರಕ್ತ ಚಂದನದ ತುಂಡುಗಳ ಪೈಕಿ ಮಾದರಿಯಾಗಿ ಮರದ ಪೀಸುಗಳನ್ನು ತೆಗೆದುಕೊಂಡು ಒಂದು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ 'ಕೆ' ಎನ್ನುವ ಮೊಹರನ್ನು ಹಾಕಿದ್ದರು ಎಂದರೆ ಸರಿಯಲ್ಲ. ನಂತರ ನನ್ನ ಸಮಕ್ಷಮ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ನಿಪಿ.1 ರಂತೆ ಮಹಜರನ್ನು ಜರುಗಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಮಹಜರಿಗೆ ಪಂಚರನ್ನಾಗಿ ನಿಪಿ.1(ಬಿ) ರಂತೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ದಿ:28.01.2014 ರಂದು ಚಾ.ಸಾ.12 ರವರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.2 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ಶ್ರೀಯುತ ಎ.ಕೆ.ವಿ ವಕೀಲರಿಂದ: ಏನು ಇಲ್ಲ

**<u>ಮರುವಿಚಾರಣೆ:-ಇಲ್ಲ-</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.

Case called out.
Accused no.1 to 3 are present.
Summons issued to CW-1 duly served.

CW-1 is present and examined as PW-1 and got marked Ex.P-1 to Ex.P-3.
The learned APP files a memo, praying the Court to issue summons to rest of charge sheet witnesses.
On perusal of prosecution evidence, complainant cum injured turned hostile to the case of the prosecution. Therefore, no purpose of prosecution will survive the examination of other charge sheet witnesses. Hence, memo is hereby rejected.
As there are no incriminating circumstances appeared in the prosecution witnesses. Hence statement of accused no.1 to 3 U/sec.313 of Cr.PC is dispensed.
The counsels for the accused files a memo, it has been stated therein that surety furnished by the accused at the time of bail may be considered as compliance U/Sec.437(A) of Cr.P.C.,
Memo is accepted.
For Arguments by 18.06.2024.

**Prl. Civil Judge & JMFC.,**
**Hoskote**